# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 85/2023

**ಪಿರ್ಯಾದಿದಾರರು** – ಸರ್ಕಾರದ ಪರವಾಗಿ **ಚಿತ್ರಹಳ್ಳಿ ಗೇಟ್ ಪೊಲೀಸರು**

– ವಿರುದ್ಧ –

**ಆರೋಪಿಗಳು** – 1) **ಪರಮೇಶ್ವರಪ್ಪ ತಂದೆ ಕರಿಯಪ್ಪ** ,
35 ವರ್ಷ, ಕಣಿವೆ ಜೋಗಿಹಳ್ಳಿ,
ಹೊಳಲ್ಕೆರೆ ತಾಲ್ಲೂಕು ,
ಚಿತ್ರದುರ್ಗ ಜಿಲ್ಲೆ .

2) **ಬಸವರಾಜ ತಂದೆ ಕರಿಯಪ್ಪ ,**
38 ವರ್ಷ, ಕಣಿವೆ ಜೋಗಿಹಳ್ಳಿ,
ಹೊಳಲ್ಕೆರೆ ತಾಲ್ಲೂಕು ,
ಚಿತ್ರದುರ್ಗ ಜಿಲ್ಲೆ .

3) **ಹನುಮಂತಪ್ಪ ತಂದೆ ಕರಿಯಪ್ಪ ,**
40 ವರ್ಷ, ಕಣಿವೆ ಜೋಗಿಹಳ್ಳಿ,
ಹೊಳಲ್ಕೆರೆ ತಾಲ್ಲೂಕು ,
ಚಿತ್ರದುರ್ಗ ಜಿಲ್ಲೆ .

## – ದೋಷಾರೋಪಣೆ –

**ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ** 2 ನೇ *ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ* ಆದ ನಾನು

ಆರೋಪಿತರಾದ **ಪರಮೇಶ್ವರಪ್ಪ ತಂದೆ ಕರಿಯಪ್ಪ , ಬಸವರಾಜ ತಂದೆ ಕರಿಯಪ್ಪ, ಹನುಮಂತಪ್ಪ ತಂದೆ ಕರಿಯಪ್ಪ** ನಿಮ್ಮಗಳ ಮೇಲೆ ಈ ಕೆಳಕಂಡಂತೆ ಆರೋಪಿಸುವುದೇನೆಂದರೆಃ–

1. ದಿನಾಂಕ 01.08.2020 ರಂದು ಬೆಳಗ್ಗೆ 11.30 ಗಂಟೆಗೆ ಹೊಳಲ್ಕೆರೆ ತಾಲ್ಲೂಕು , ಕಣಿವೇ ಜೋಗಿಹಳ್ಳಿ ಗ್ರಾಮದ ಸಮೀಪ ಇರುವ ಸರ್ಕಾರಿ ಗುಡ್ಡದಲ್ಲಿ ಚಾಸಾ –1, 4 ರಿಂದ 7 ರವರು ತಮ್ಮ–ತಮ್ಮ

ಕುರಿಗಳನ್ನು ಮೇಯಿಸಲು ಹೋಗಿದ್ದು ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಏನೋ ಸೂಳೇ ಮಕ್ಕಳಾ, ಬೋಳಿ ಮಕ್ಕಳಾ ಇಲ್ಲಿಗೆ ಏಕೆ ಕುರಿಗಳನ್ನು ಮೇಯಿಸಲು ಬಂದಿದ್ದೀರಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು **ಭಾರತೀಯ ದಂಡ ಸಂಹಿತೆಯ ಕಲಂ 504 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ .**

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿಯಾದ ನೀನು ಸಮಾನ ಉದ್ದೇಶದಿಂದ ಚಾಸಾ-4 , 5 ಇವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು, **ಭಾರತೀಯ ದಂಡ ಸಂಹಿತೆಯ ಕಲಂ 323 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ .**

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ -1 ಇವರ ಜೊತೆಗೆ ಜಗಳ ತೆಗೆದು 1 ನೇ ಆರೋಪಿಯಾದ ನೀವು ಕೊಡಲಿಯಿಂದ ಚಾಸಾ -1 ರವರ ಬಲಕೆನ್ನೆಗೆ ಹೊಡೆದು **ಭಾರತೀಯ ದಂಡ ಸಂಹಿತೆಯ ಕಲಂ 324 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ .**

**4.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ -1, 5 , 6 ಇವರಿಗೆ ಇನ್ನೊಂದು ಸಾರಿ ನಿಮ್ಮ ಕುರಿಗಳನ್ನು ಮೇಯಿಸಲು ಹೊಡೆದುಕೊಂಡು ಬಂದರೇ ನಿಮ್ಮ ಪ್ರಾಣ ತೆಗೆಯುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ್ದು **ಭಾರತೀಯ**

**ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.**

ಈ ಮೇಲಿನ ಆಪಾದನೆಗೆ ನಿನ್ನ ಮೇಲೆ ವಿಚಾರಣೆ ನಡೆಸಲಾಗುವುದು.

**(ಗಂಗಾಧರ ಚನ್ನಬಸಪ್ಪ ಹಡಪದ)**
**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 85/2023

**ಪಿರ್ಯಾದಿದಾರರು** – ಸರ್ಕಾರದ ಪರವಾಗಿ **ಚಿತ್ರಹಳ್ಳಿ ಗೇಟ್ ಪೊಲೀಸರು**

– ವಿರುದ್ಧ –

**ಆರೋಪಿಗಳು** –

1) **ಪರಮೇಶ್ವರಪ್ಪ ತಂದೆ ಕರಿಯಪ್ಪ** ,
35 ವರ್ಷ, ಕಣಿವೆ ಜೋಗಿಹಳ್ಳಿ,
ಹೊಳಲ್ಕೆರೆ ತಾಲ್ಲೂಕು ,
ಚಿತ್ರದುರ್ಗ ಜಿಲ್ಲೆ .

2) **ಬಸವರಾಜ ತಂದೆ ಕರಿಯಪ್ಪ** ,
38 ವರ್ಷ, ಕಣಿವೆ ಜೋಗಿಹಳ್ಳಿ,
ಹೊಳಲ್ಕೆರೆ ತಾಲ್ಲೂಕು ,
ಚಿತ್ರದುರ್ಗ ಜಿಲ್ಲೆ .

3) ಹನುಮಂತಪ್ಪ ತಂದೆ ಕರಿಯಪ್ಪ ,
40 ವರ್ಷ, ಕಣಿವೆ ಜೋಗಿಹಳ್ಳಿ,
ಹೊಳಲ್ಕೆರೆ ತಾಲ್ಲೂಕು ,
ಚಿತ್ರದುರ್ಗ ಜಿಲ್ಲೆ .

## — ದೋಷಾರೋಪಣೆ —

1) ಈಗ ಕನ್ನಡದಲ್ಲಿ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ?

ಉತ್ತರಃ

2) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯೇ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ವಿವರಿಸಿ ಹೇಳಲಾಯಿತು ಹಾಗೂ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**(ಗಂಗಾಧರ ಚನ್ನಬಸಪ್ಪ ಹಡಪದ)**

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ಚಿತ್ರದುರ್ಗ.